# ಸೈಕಲ್ ಪಯಣದಲ್ಲಿ ಕಂಡ ಹಿಮಾಲಯದ ಬಿಡಿ ಚಿತ್ರಗಳು

**ಸೈಕಲ್ ಸವಾರಿ ಮಾಡುತ್ತಾ ಹಿಮಾಲಯವನ್ನು ಅನುಭವಿಸುವ ಪರಿಯೇ ವಿಶಿಷ್ಟ. ಶಾಂತ ನೀಲಾಗಸದ ಕೆಳಗೆ ನಿಂತ ಹಿಮಕವಿದ ಬೆಟ್ಟಗಳನ್ನು, ನಿಶ್ಚಲ ಪರ್ವತಗಳನ್ನು, ಭಯ ಬಿತ್ತುವ ಕಣಿವೆಗಳನ್ನು, ಆ ಕಣಿವೆಗಳಲ್ಲಿ ನಿರಾಳವಾಗಿ ಹರಿವ ನದಿಗಳ ಚೆಲುವನ್ನು ಕಣ್ತುಂಬಿಸಿಕೊಂಡು ಸಾಗುವ ಹಾದಿ ಮೈಮನಗಳನ್ನು ಅರಳಿಸುವುದು ಸುಳ್ಳಲ್ಲ.**

**■ ಗಣೇಶ್ ನಾಯಕ್**

ನನ್ನ ಆರು ವಿದ್ಯಾರ್ಥಿಗಳೊಂದಿಗೆ ಹಿಮಾಲಯದ ಲಡಾಖ್ ಪ್ರಾಂತ್ಯದಲ್ಲಿನ ಝನ್ಸ್‌ಕಾರ್ ಕಣಿವೆಯನ್ನು ಸೈಕಲ್‌ನಲ್ಲಿಯೇ ಸುತ್ತಬೇಕೆಂಬುದು ಬಹುದಿನದ ಯೋಜನೆಯಾಗಿತ್ತು. ನಾಲ್ಕು ಹುಡುಗರು, ಇಬ್ಬರು ಹುಡುಗಿಯರು ಹಾಗೂ ನಾನು. ಒಟ್ಟು 12 ದಿನಗಳ 525 ಕಿ.ಮೀ. ದೂರದ ಅತ್ಯಂತ ಕಠಿಣ, ದುರ್ಗಮ ಹಾದಿಯ ಪಯಣ.

ಪ್ರಕೃತಿ ಒಡ್ಡುವ ಸವಾಲುಗಳನ್ನು ಎದುರಿಸುವ ಸಾಹಸಕ್ಕೆ ಸಾಕಷ್ಟು ಪೂರ್ವ ತಯಾರಿ ಮಾಡಿಕೊಂಡು ನೀಲನಕ್ಷೆ ಹಾಕಿಕೊಂಡಿದ್ದೆವು. ಎಲ್ಲರೂ ಪಶ್ಚಿಮಘಟ್ಟದ ಏರಿಳಿತದ ದಾರಿಗಳಲ್ಲಿ ಹಲವು ಬಾರಿ ಸೈಕಲ್ ಸವಾರಿ ನಡೆಸಿ, ಅತ್ಯಂತ ಕಡಿಮೆ ಲಗೇಜಿನಲ್ಲಿ, ಹಗುರವಾಗಿ ಹೇಗೆ ಸೈಕಲ್ ಸಂಚಾರ ಮಾಡಬಹುದೆಂಬುದರ ಬಗ್ಗೆ ಮೈಮನಸ್ಸುಗಳನ್ನು ತರಬೇತುಗೊಳಿಸಿದೆವು.

ಬೆಂಗಳೂರಿನಿಂದ ರೈಲಿನಲ್ಲಿ ಸೈಕಲ್‌ಗಳ ಸಮೇತ ಹೊರಟು, ದೆಹಲಿ ಮೂಲಕ ಜಮ್ಮು ತಲುಪಿದೆವು. ಅಲ್ಲಿಂದ ಟೆಂಪೊ ವ್ಯಾನ್‌ನಲ್ಲಿ ಕಾಶ್ಮೀರದ ಸೋನ್‌ಮಾರ್ಗ್ ಊರು ತಲುಪಿದೆವು. ಆ ರಾತ್ರಿ ಮತ್ತು ಮರುದಿನ ಅಲ್ಲಿನ ವಸತಿಗೃಹದಲ್ಲಿ ಉಳಿದು ಹೊಸ ಎತ್ತರಕ್ಕೆ ದೇಹವನ್ನು ಹೊಂದಿಸಿಕೊಂಡೆವು. ಅಲ್ಲಿಂದ ನಮ್ಮ ಸೈಕಲ್ ಯಾತ್ರೆಯ ಮೊದಲ ದಿನವನ್ನು ಹುಮ್ಮಸ್ಸಿನಿಂದ ಪ್ರಾರಂಭಿಸಿದೆವು.

### ಜೊಜಿಲಾ ಸಾಂಗತ್ಯದಲ್ಲಿ...

ನಮ್ಮ ಮೊದಲ ದಿನದ ಗುರಿ, ಸೋನ್‌ಮಾರ್ಗ್‌ನಿಂದ 15 ಕಿ.ಮೀ. ದೂರದಲ್ಲಿದ್ದ ಜೊಜಿಲಾ ಕಣಿವೆ ದಾಟಿ ಮುಂದುವರಿಯುವುದಾಗಿತ್ತು. ಜೊಜಿಲಾ 11,000 ಅಡಿ ಎತ್ತರದ ಪರ್ವತ ಕಣಿವೆಯಾಗಿದ್ದು, ಕಾಶ್ಮೀರ ರಾಜಧಾನಿ ಶ್ರೀನಗರವನ್ನು, ಲಡಾಖ್ ರಾಜಧಾನಿ ಲೇಹ್‌ಗೆ ಜೋಡಿಸುತ್ತದೆ. ಜೊಜಿಲಾ, ಇಲ್ಲಿನ ಪ್ರಮುಖ ಪ್ರವಾಸಿ ತಾಣವಾದ್ದರಿಂದ ದಾರಿಪೂರ್ತಿ ವಾಹನ ದಟ್ಟಣೆ. ವಾಹನಗಳ ನಡುವೆ ದಾರಿ ಮಾಡಿಕೊಳ್ಳುತ್ತ, ಏರುದಾರಿಯಲ್ಲಿ ನಿಧಾನವಾಗಿ ಸೈಕಲ್ ತುಳಿಯುತ್ತ, ಜೊಜಿಲಾ ಮುಟ್ಟಿದಾಗ ಮಧ್ಯಾಹ್ನ ಮೂರು ಗಂಟೆ. ಜೊಜಿಲಾದಿಂದ ಇಳಿಜಾರಿನ ದಾರಿಯಲ್ಲಿ 15 ಕಿ.ಮೀ. ಹೋದರೆ ಸಿಗುವ ಮೆತಾಯಿನ್ ಎಂಬ ಸಣ್ಣ ಹಳ್ಳಿಯಲ್ಲಿ ರಾತ್ರಿ ತಂಗಿದೆವು. ಇಡೀ ಲಡಾಖ್ ಪ್ರಾಂತ್ಯದಲ್ಲಿ ಕಾಶ್ಮೀರಿ ಭಾಷೆ ಮಾತಾಡುವ ಕಾಶ್ಮೀರಿಗರು ಇರುವ ಹಳ್ಳಿಯೆಂದರೆ ಮೆತಾಯಿನ್ ಒಂದೇ. ಮೆತಾಯಿನ್‌ನಿಂದ ಬೆಳಿಗ್ಗೆ ಹೊರಟಾಗ, ಸಂಜೆಗೆ ಮೊದಲು 80 ಕಿ.ಮೀ. ದೂರದ ಕಾರ್ಗಿಲ್ ಪಟ್ಟಣ ಸೇರುವ ಗುರಿ ನಮ್ಮದಾಗಿತ್ತು. ಮುಂಜಾನೆ ತುಂಬಾ ಥಂಡಿಯಿದ್ದರೂ ದಿನ ಕಳೆದಂತೆ ಬಿಸಿಲೇರಿ ಮೈ ಬೆಚ್ಚಗಾಗತೊಡಗಿತು. ಸುಮಾರು 20 ಕಿ.ಮೀ. ದಾಟಿದಾಗ ದಾರಿಯಲ್ಲಿ ದ್ರಾಸ್ ಹಳ್ಳಿ ಸಿಗುತ್ತದೆ. ಎತ್ತರದ ಹಿಮಾಲಯ ಚಾರಣಗಳಿಗೆ ದ್ರಾಸ್ ಹೆಸರುವಾಸಿ. ಭಾರತದಲ್ಲೇ ಅತ್ಯಂತ ಹೆಚ್ಚಿನ ಚಳಿ ಜಾಗವೂ ಹೌದು. ಮುಂದೆ ದ್ರಾಸ್ ನದಿ ದಂಡೆಗುಂಟ ಇಳಿಜಾರಿನ ಹಾದಿಯಲ್ಲಿ ಆರಾಮವಾಗಿ ಕಾರ್ಗಿಲ್ ಪಟ್ಟಣ ತಲುಪಿದೆವು.

ನಮ್ಮ ಪ್ರಯಾಣದ ದಾರಿಯಲ್ಲಿ ಕಾರ್ಗಿಲ್ ಅತ್ಯಂತ ತಗ್ಗಿನ ಸ್ಥಳವಾಗಿದ್ದು (8000 ಅಡಿ), ಇಲ್ಲಿ ಒಂದು ದಿನ ತಂಗಿ ಚೆನ್ನಾಗಿ ಗಾಳಿ ಸೇವನೆ ಮಾಡಿ ಸೈಕಲ್‌ಗಳನ್ನು ಸ್ವಚ್ಛ ಮಾಡಿದೆವು. ಕಾರ್ಗಿಲ್‌ನಿಂದ ಪಶ್ಚಿಮದ ದಾರಿ, ಲೇಹ್ ಪಟ್ಟಣಕ್ಕೆ ಹೋದರೆ ದಕ್ಷಿಣ ದಾರಿ ಝನ್ಸ್‌ಕಾರ್ ಪ್ರಾಂತ್ಯ ಪ್ರವೇಶಿಸುತ್ತದೆ.

ಕಾಶ್ಮೀರವನ್ನು ಲಡಾಖ್‌ನಿಂದ ಬೇರ್ಪಡಿಸುವ ಝನ್ಸ್‌ಕಾರ್, ಎತ್ತರದ ಪರ್ವತ–ಕಣಿವೆಗಳಿಂದ

